## ಜ್ಞಾನಕ್ಕೆ ಮಾಧ್ಯಮ ಪ್ರಮುಖವಲ್ಲ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಮೂಡಿ ಬರುತ್ತಿರುವ 'ಕನ್ನಡದ ಕೋಟ್ಯಧಿಪತಿ' ಕಾರ್ಯಕ್ರಮದಲ್ಲಿ ಇತ್ತೀಚೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಓದುತ್ತಿರುವ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಯ ಮಕ್ಕಳನ್ನು ಆಯ್ಕೆ ಮಾಡಿ ಕಾರ್ಯಕ್ರಮ ನಡೆಸಿದ್ದಕಾಗಿ ವಾಹಿನಿಯವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಮುಖ್ಯವಾಗಿ ಬೆಳ್ಳೂರು ಕ್ರಾಸ್ ಶಾಲೆಯ ವಿದ್ಯಾರ್ಥಿನಿ, ವರಲಕ್ಷ್ಮಿ, ಯಾವುದೇ ಲೈಫ್ ಲೈನ್ ಇಲ್ಲದೇ 1.60 ಲಕ್ಷದ ಹಂತ ತಲುಪಿ, ಇನ್ನೂ ಎರಡೂ ಲೈಫ್ ಲೈನ್ ಇರುವಾಗಲೇ ಒಂದು ಚಿಕ್ಕ ತಪ್ಪಿನಿಂದ ಆಟದಿಂದ ನಿರ್ಗಮಿಸಿದ್ದು ಸಕಲ ವೀಕ್ಷಕರಿಗೆ ಬೇಸರ ಉಂಟು ಮಾಡಿದೆ. ಸ್ಪರ್ಧೆಯಲ್ಲಿನ ಯಶಸ್ಸಿಗೆ ಮಾಧ್ಯಮದ ಮಹತ್ವ ಇರದು, ಜ್ಞಾನಕ್ಕೆ ಜ್ಞಾನವೇ ಸಾಟಿ ಎಂಬುದಕ್ಕೆ ಈ ಕಾರ್ಯಕ್ರಮವೇ ಉದಾಹರಣೆ. ವರಲಕ್ಷ್ಮಿಯೇ ಮಾನದಂಡ.

—ರಾಜೀವ್ ಎಸ್. ಮಾಗಲ್

## ತಪ್ಪಾಗದಿರಲಿ

ಈಗೀಗ ಇಂಗ್ಲಿಷ್ ಪದಗಳನ್ನು ಕನ್ನಡದಲ್ಲಿ ಬರೆಯುವುದು ಕೆಲವರಿಗೆ ಅಭ್ಯಾಸ. ಆದರೆ ಆ ಪದ ಇಂಗ್ಲೀಷ್ ಆಗಿದ್ದರೂ ಸರಿಯಾಗಿ ಬರೆದರೆ ಮಾತ್ರ ಕನ್ನಡ ಭಾಷೆಗೆ ಮರ್ಯಾದೆ ಇಲ್ಲದಿದ್ದರೆ... ಕನ್ನಡದ ಕಗ್ಗೊಲೆ ಎಂದೆನಿಸುತ್ತದೆ.

ಕಸ್ತೂರಿ ನ್ಯೂಸ್ 24 ಕನ್ನಡ ವಾಹಿನಿಯಲ್ಲಿ ಪ್ರಸಾರವಾದ ದಸರಾ ಹಬ್ಬದ ವಿಶೇಷ ಕಾರ್ಯಕ್ರಮದಲ್ಲಿ ಚಲನಚಿತ್ರ ನಟಿ ಸುಧಾರಾಣಿ ಅವರಿಗೆ RAPID (ರ್‍ಯಾಪಿಡ್) QUESTIONS 'ರ್‍ಯಾಪಿಡ್' ಎಂದು ಕನ್ನಡದಲ್ಲಿ ಬರೆದಿದ್ದು ಎಷ್ಟು ಸರಿ?

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಸಲ್ಲಾಪದಂತಿರಲಿ

'ಮಗಳು ಜಾನಕಿ' ಧಾರಾವಾಹಿಯಲ್ಲಿ ಎತ್ತಿ ತೋರಿಸುವಂಥ ಯಾವುದೇ ಲೋಪದೋಷಗಳು ಕಾಣುವುದಿಲ್ಲ. ಆದರೂ, ಯಾಕೋ ಶ್ಯಾಮಲತ್ತೆ ಮತ್ತು ಸಂದರ ಮೂರ್ತಿಯವರ ಕಲಹದ ದಾಟಿ ರುಚಿಸುತ್ತಿಲ್ಲ.

ಮಾತು ಮಾತಿಗೂ ಶ್ಯಾಮಲತ್ತೆ ಸುಂದರ ಮೂರ್ತಿಯವರನ್ನು ಹಂಗಿಸುವುದು, ಚೇಷ್ಟೆ ಮಾಡುವುದು, ವ್ಯಂಗ್ಯವಾಡುವುದು ಮತ್ತು ಅವರನ್ನು ಎಡಬಿಡಂಗಿ ಎಂದು ಟ್ರೀಟ್ ಮಾಡುವುದು, ಎಲ್ಲರೆದುರಿಗೆ ಅವಮಾನಿಸುವುದು ಮುಖ್ಯವಾಗಿ ಅಣ್ಣ, ಮಗಳು ಮತ್ತು ವೈವಾಹಿಕ ಸಂಬಂಧ ಬೆಳೆಸಲು ಬಂದವರ ಎದುರಿಗೆ ಸ್ವಲ್ಪ ಅಸಹನೀಯ ಎನಿಸುತ್ತದೆ. ಕೌಟುಂಬಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಈ ಧಾರಾವಾಹಿಯಲ್ಲಿ, ಇಂತಹ ಸನ್ನಿವೇಶಗಳು ನೋಡುಗರಿಗೆ ಮುಜುಗರ ಉಂಟುಮಾಡುತ್ತವೆ. ಜಗಳ ಮಾಡಿಕೊಳ್ಳದಿದ್ದರೆ ಗಂಡ ಹೆಂಡಿರೇ ಅಲ್ಲ ಎನ್ನುವ ಕೌಟುಂಬಿಕ ವ್ಯವಸ್ಥೆಯಲ್ಲಿ ಪತಿಪತ್ನಿಯರ ಮಧ್ಯದ ಕಲಹ ಓಕೆ. ಆದರೆ, ಅದು ಎಲ್ಲೆ ಮೀರದೆ ಮುದ್ದಣ್ಣ ಮನೋರಮೆಯರ ಸರಸ ಸಲ್ಲಾಪದಂತಿದ್ದು ವೀಕ್ಷಕರಿಗೆ ಮುದ ನೀಡುವಂತರಿಬೇಕು.

—ರಮಾನಂದ ಶರ್ಮಾ ಬೆಂಗಳೂರು

ವಾರದ ಪತ್ರ

## ಏನಾಗಿದೆ ಮಗಳು ಜಾನಕಿಗೆ?

ಪ್ರಾರಂಭದಲ್ಲಿ ಅತ್ಯುತ್ತಮವಾಗಿ ಮೂಡಿ ಬಂದ ಕಲರ್ಸ್ ಸೂಪರ್‌ನ 'ಮಗಳು ಜಾನಕಿ' ವೀಕ್ಷಕರಲ್ಲಿ ಆಶಾಭಾವನೆ ಹುಟ್ಟಿಸಿತ್ತು. ಹುರುಳಿಲ್ಲದ ಜಂಜೆತಾಳದಂತಿದ್ದ ಧಾರಾವಾಹಿಗಳ ಮಹಾಪೂರದಲ್ಲಿ 'ಅಗ್ನಿಸಾಕ್ಷಿ' ಯಾಗಿಯೂ ನೊಂದು ಬೆಂದುಹೋಗುತ್ತಿದ್ದ ಪಾಪದ ವೀಕ್ಷಕರಲ್ಲಿ ಕುತೂಹಲ, ಭರವಸೆ ಚಿಗುರೊಡೆದು ಹೂ ಬಿಡುವ ಸಮಯದಲ್ಲಿ ಗ್ರಹಣ ಬಡಿಯಿತೇ?

ವಿಜ್ಞಾಪನೆಗಳ ಹಾವಳಿಯ ನಡುವೆ ಸಿಗುವ ಸ್ವಲ್ಪ ಸಮಯದಲ್ಲೇ ಮೂರು ಬೇರೇ ಬೇರೆ ಸೀನುಗಳಲ್ಲಿ ಹೇಳಿದ್ದನ್ನೇ ಮತ್ತೆ ಮತ್ತೆ ವಿವರವಾಗಿ ಹೇಳಿಸುವ ತಂತ್ರಗಾರಿಕೆ ತಲೆಚಿಟ್ಟು ಹಿಡಿಸಿದೆ. ಅದರಲ್ಲೂ ಹಲವು ದಿನಗಳಿಂದಲೂ ಮಧುಕರ ಧಾತ್ರಿ ಮದುವೆ ವಿಷಯವೇ ಗಹನ ಚರ್ಚೆಗೆ ಆಹಾರವಾಗಿರುವುದು. ಡಿವೈಎಸ್ಪಿ ಜಾನಕಿ ಮಾಡಲು ಬೇರೆ ಕೆಲಸವಿಲ್ಲದವರಂತೆ ಮದುವೆ ದಲ್ಲಾಳಿಯಂತೆ ವರ್ತಿಸುತ್ತಿರುವುದು ಹಾಸ್ಯಾಸ್ಪದ. ಧಾರಾವಾಹಿಯನ್ನು ಆಮೆಗತಿಯಲ್ಲಿ ನಡೆಸುತ್ತಿರುವುದರ ಸದುದ್ದೇಶ ವೀಕ್ಷಕ ಮಹಾಶಯ ಟೀವಿ ಆರಿಸಿ ಸುಖನಿದ್ದೆಗೆ ಜಾರಲಿ ಎಂದಾಗಿದ್ದರೆ, ಆ ಕಳಕಳಿಗೆ ಕೃತಜ್ಞತೆಗಳು !

—ಲತಾ ಹೆಗಡೆ ಹುಬ್ಬಳ್ಳಿ

## ಪ್ರತಿಭೆಗಳ ಕಡೆಗಣನೆ

ಕಲರ್ಸ್ ಕನ್ನಡದಲ್ಲಿ ಬಿಗ್‌ಬಾಸ್–7 ಆರಂಭಗೊಂಡಿದೆ. ಸಾರ್ವಜನಿಕ ಕ್ಷೇತ್ರದ ಕೆಲವರನ್ನು ಹೊರತುಪಡಿಸಿದರೆ ಇಲ್ಲಿ ಅವಕಾಶ ಪಡೆದಿರುವವರೆಲ್ಲ ಬಹುತೇಕ ಕಿರುತೆರೆಯ ಕಲಾವಿದರೆ. ರವಿ ಬೆಳಗೆರೆ, ಸ್ವಾಮೀಜಿ, ಲೇಖಕಿ ಚೈತ್ರಾ ಕೊಟ್ಟೂರು ಮಾತ್ರ ಹೊರಗಿನವರು. ಹಿರಿತೆರೆಯ ಕಲಾವಿದ ಜೈಜಗದೀಶ್ ಮಾತ್ರ ಹಿರಿಯರಾಗಿ ಗಮನ ಸೆಳೆಯುತ್ತಾರೆ. ಕನ್ನಡದಲ್ಲಿ ಪ್ರತಿಭಾವಂತರಿಗೆ ಬರವೇ? ವಿವಿಧ ಕ್ಷೇತ್ರದಲ್ಲಿ ಸಾಧಕರನ್ನು ಈ ಮನೆಯಲ್ಲಿ ಒಂದೆಡೆ ಸೇರಿಸಿದ್ದರೆ ಈ ಶೋ ನಿಜಕ್ಕೂ ಅರ್ಥಪೂರ್ಣವಾಗಿರುತ್ತಿತ್ತು. ವೀಕ್ಷಕರಿಗೂ ಇದರಿಂದ ಒಂದಿಷ್ಟಾದರೂ ಒಳ್ಳೆಯ ಮಾಹಿತಿ ಲಭ್ಯವಾಗುತ್ತಿತ್ತು.

—ಎಸ್. ಲಕ್ಷ್ಮೀ ನರಸಿಂಹ, ಚಾಮರಾಜನಗರ

## ಚೈತನ್ಯದ ವಿಜಯಲಕ್ಷ್ಮಿ

'ಜೊತೆ ಜೊತೆಯಲಿ'ಯಲ್ಲಿ ವಿಜಯಲಕ್ಷ್ಮಿಸಿಂಗ್ ಆರ್ಯವರ್ಧನನ ಅಮ್ಮನಾಗಿ ಕಾಣಿಸಿಕೊಂಡಿದ್ದಾರೆ. ಪ್ರತಿಮಾ ಶಂಕರ್ ಪುತ್ರಿ, ಬಾಬು ಸೋದರಿ, ಜಗದೀಶ್ ಪತ್ನಿಯಾಗಿ ಹಿಂದೆ ಹೇಗಿದ್ದರೋ ಈಗಲೂ ಅದೇ ಚಾರ್ಮ್ ಉಳಿಸಿಕೊಂಡಿರುವುದು ಬ್ರಹ್ಮನ ಸೃಷ್ಟಿ ಎನ್ನಬಹುದು. ಕೆಲವರನ್ನು ವಯಸ್ಸಾದ ನಂತರ ಗುರುತು ಹಿಡಿಯುವುದೇ ಕಷ್ಟ. ಆದರೆ ಪ್ರಾಯದ ಫಟಾಫಟ್ ಬೋಲ್ಡ್ ನಟ ವಿಜಯಲಕ್ಷ್ಮಿಸಿಂಗ್ ವಿಷಯದಲ್ಲಿ ಹಾಗಲ್ಲ. ನೋಡಿದ ತಕ್ಷಣ ನೆನಪು ಹಿಂದಕ್ಕೆ ಸರಿಯಿತು. ಅದುವೇ ವಿಜಯಲಕ್ಷ್ಮಿಸಿಂಗ್ ಹೆಗ್ಗಳಿಕೆ. ವಯಸ್ಸಾದರೂ ನಟನೆಗೆ ಮುಪ್ಪಿಲ್ಲ. ಅದು ಹೀಗೇ ಮುಂದುವರಿಯಲಿ.

—ಎ.ಎನ್. ಮಹಾಬಲರಾವ್, ನರಸಿಂಹರಾಜಪುರ

## ಅಮೂಲ್ಯಗೆ ಅಮೂಲ್ಯನೆ ಸಾಟಿ

ಗಟ್ಟಿಮೇಳ ಧಾರಾವಾಹಿಯಲ್ಲಿ ನಟಿಸುತ್ತಿರುವ ಅಮೂಲ್ಯ ಯಾನೆ ಅಮ್ಮು ಅರಳು ಹುರಿದಂತೆ ಪಟ ಪಟ ಶಬ್ದ ಮಾಡುತ್ತ ಉತ್ತಮವಾಗಿ ಅಭಿನಯಿಸುತ್ತಿರುವರು. ಅವರ ಮುಖಭಾವ, ನಗು ನೋಡಿದರೆ ಅವರಿಗೆ ಅವರೇ ಸಾಟಿ ಎನಿಸುತ್ತದೆ. ವೇದಾಂತ್‌ನನ್ನು ಕಿಚಾಯಿಸುತ್ತಾ ಗೋಳು ಹುಯ್ದುಕೊಳ್ಳುವುದು. ಅದಕ್ಕೆ ಆತ ಪ್ರತಿಕ್ರಿಯಿಸಲಾರದೆ ಸಪ್ಪೆಯಾಗುವುದು ಚೆನ್ನಾಗಿ ಮೂಡಿ ಬರುತ್ತಿದೆ. ಮಗಳು ಜಾನಕಿಯಲ್ಲಿ ಶ್ಯಾಮಲಾ (ಸುಧಾ ಬೆಳವಾಡಿ) ಮತ್ತು ಆಕೆಯ ಗಂಡನ ಮುಖಭಾವ ನಗು ತರಿಸುತ್ತದೆ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಮುಖ್ಯಾಂಶವೂ ಪ್ರಸಾರವಾಗಲಿ

ಕನ್ನಡ ವಾರ್ತೆಗಳನ್ನು ಪ್ರಸಾರ ಮಾಡುತ್ತಿರುವ ಹಲವಾರು ವಾಹಿನಿಗಳಿವೆ. ಆ ಪೈಕಿ 'ಚಂದನ' ವಾಹಿನಿಯವರು ಮಾತ್ರ ವಾರ್ತೆಗಳನ್ನು ಪ್ರಸಾರ ಮಾಡುವಾಗ ಆರಂಭದಲ್ಲಿ ಮತ್ತು ಅಂತ್ಯದಲ್ಲಿ ವಾರ್ತೆಗಳ ಮುಖ್ಯಾಂಶ ಪ್ರಸಾರ ಮಾಡುತ್ತಿದ್ದಾರೆ. ಆದರೆ ಪ್ರಮುಖ ಸುದ್ದಿವಾಹಿನಿಗಳಾದ ಪಬ್ಲಿಕ್, ಟೀವಿ 9, ನ್ಯೂಸ್ 18... ಸುದ್ದಿ ಆರಂಭಿಸುವ ಮುಂಚೆ ಸ್ಪಷ್ಟವಾಗಿ ಮುಖ್ಯಾಂಶಗಳನ್ನು ಪ್ರಕಟಿಸದೇ ಇರುವುದು ಮಿತಿ ಎಂದೇ ಅನ್ನಿಸುತ್ತದೆ. ಪ್ರೇಕ್ಷಕರಿಗೆ ಕೆಲವೊಮ್ಮೆ ಮುಖ್ಯಾಂಶ ತಿಳಿಯುವುದಿಲ್ಲ. ಮಾತ್ರವಲ್ಲದೆ ತನಗೆ ಯಾವುದು ಮುಖ್ಯ ಎಂದು ಗಮನಿಸಲು ಕೂಡ ಇದರಿಂದ ಸಹಾಯವಾಗುತ್ತದೆ. ಘಟನೆಯೊಂದನ್ನು ದೀರ್ಘಕಾಲ ಎಳೆದು ವಿವಾದ ಎಬ್ಬಿಸುವ ಬದಲು ಘಟನೆಯ ಅಗತ್ಯದಷ್ಟೇ ಪ್ರಸರಿಸಿದರೆ ಇನ್ನೂ ಉತ್ತಮ.

—ನಾರಾಯಣ ಯಾಜಿ, ಶಿರಾಲಿ